**Series ONS** | **SET-4**

**Code No. 15**

**Roll No.** | | | | | | | |

Candidates must write the Code on the title page of the answer-book.

- Please check that this question paper contains **11** printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains **23** questions.
- **Please write down the Serial Number of the question before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.

# ಕನ್ನಡ

# KANNADA

*ಅನುಮತಿಸಲಾದ ಸಮಯ : 3 ಗಂಟೆ* — *ಗರಿಷ್ಠ ಅಂಕಗಳು : 100*

*Time allowed : 3 hours* — *Maximum Marks : 100*

***ಸೂಚನೆಗಳು :*** *ಈ ಪ್ರಶ್ನೆ ಪತ್ರಿಕೆಯು ಎ, ಬಿ, ಸಿ ಮತ್ತು ಡಿ ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.*

| | | |
|---|---|---|
| ***ವಿಭಾಗ – A*** *(ವ್ಯಾಕರಣ)* | : | **25** *ಅಂಕಗಳು* |
| ***ವಿಭಾಗ – B*** *(ಅರ್ಥಗ್ರಹಿಕೆ)* | : | **10** *ಅಂಕಗಳು* |
| ***ವಿಭಾಗ – C*** *(ಬರವಣಿಗೆ)* | : | **15** *ಅಂಕಗಳು* |
| ***ವಿಭಾಗ – D*** *(ಪಠ್ಯಗಳ ಅಧ್ಯಯನ)* | : | **50** *ಅಂಕಗಳು* |

## ವಿಭಾಗ - A

## (ವ್ಯಾಕರಣ) : 25 ಅಂಕಗಳು

1. ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ.

(ಅ) ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ : 1

ನಾವೆಲ್ಲ ಚೈತನ್ಯ ತುಂಬುವ ಕೆಲಸವನ್ನು ಮಾಡಬೇಕಾಗಿದೆ.

(ಆ) ಕೆಳಗಿನ ವಾಕ್ಯವನ್ನು ನಿಷೇಧಾರ್ಥದಲ್ಲಿ ಬಳಸಿ : 1

ಅವರು ಗೆಳೆಯರಿಗೆ ಆತಿಥ್ಯದ ಏರ್ಪಾಡು ಮಾಡಿದ್ದರು.

(ಇ) ಕೆಳಗಿನ ವಾಕ್ಯವನ್ನು ಸಾಮಾನ್ಯ ವಾಕ್ಯಗಳನ್ನಾಗಿ ಪರಿವರ್ತಿಸಿ : 1

ಸೈನಿಕರು ಸತತ ಕಾರ್ಯಾಚರಣೆ ಮಾಡಿದ್ದರಿಂದ ಯಶಸ್ಸು ದೊರೆಯಿತು.

(ಈ) ಕೆಳಗಿನ ವಾಕ್ಯವನ್ನು ಭವಿಷತ್ ಕಾಲದಲ್ಲಿ ಬರೆಯಿರಿ : 1

ನಂಬಿಯಣ್ಣನು ಮನೆಗೆ ನೀರು ತಂದನು.

(ಉ) ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದವನ್ನು ಗುರುತಿಸಿ ಅದರ ಧಾತುವನ್ನು ತಿಳಿಸಿ : 1

ನಾನು ವಿದೇಶ ಪ್ರವಾಸದಿಂದ ಈಗತಾನೆ ಮರಳಿದೆ.

2. ಕೆಳಗಿನ ಗದ್ಯಾಂಶವನ್ನು ಕನ್ನಡಕ್ಕೆ ರೂಪಾಂತರಿಸಿ : 5

$28^{th}$ of February, 1928 was the great day in India when an invention in the field of Indian science was completed by the famous Indian physicist, Sir Chandrasekhara Venkata Raman. He was first one in the science, who had researched such invention in India. To commemorate and honor this event always in the future, $28^{th}$ of February was asked to the Indian Government to designate as a National Science Day in India by the National Council for Science and Technology Communication (NCSTC) in the year 1986.

From then, the national science day was started celebrating all across the India as a great event in the field of Indian science. It is celebrated every year by students, teachers, scientists and researchers in all the schools, colleges, universities, educational institution including scientific, academic, medical, technical and research institutions of India. On the first celebration ceremony of the National Science Day in India, the National Council for Science and Technology Communication had declared the institution of the National Science Popularization awards in order to recognize an excellent and wonderful endeavor in the field of science communication and popularization.

3. ಕೆಳಗಿನ ಯಾವುದಾದರೂ **ಎರಡು** ಪದ್ಯಗಳಿಗೆ ಪ್ರಸ್ತಾರ ಹಾಕಿ, ಗಣ ವಿಂಗಡಣೆ ಮಾಡಿ ಛಂದಸ್ಸಿನ ಹೆಸರು ತಿಳಿಸಿ : **2½+2½=5**

(ಅ) ಎನಗೆ ವಿಭೀಷಣಂ ಹಿತಮನಾದರದಿಂದಮೆ ಪೇಳಿ ಕೇಳದಾ

(ಆ) ಕದಡಿದ ಸಲಿಲಂ ತಿಳಿವಂ
ದದೆ ತನ್ನಿಂ ತಾನೆ ತಿಳಿದ ದಶವದನಂಗಾ

(ಇ) ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ

(ಈ) ಸೊಂಪಿನಿಂ ಕಂಪಿಡುವ ಸಂಪಗೆಗಳಂ ಕೊಂಡು
ಹೊಂಪೆಸೆವ ಹೊಂಗೇದಗೆಯ ಹೂಗಳಂ ಕೊಂಡು

4. ಕೆಳಗಿನ ಯಾವುದಾದರೂ **ಎರಡು** ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ : **2½+2½=5**

(ಅ) ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು.

(ಆ) ರವಿ ಕಾಣದ್ದನ್ನು ಕವಿ ಕಂಡ.

(ಇ) ಕುಳಿತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು.

5. ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ : **½+½=1**

(ಅ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ :

(i) ಕಲಹ

(ii) ಅನುಜ

**ಅಥವಾ**

ಈ ಪದದ ನಾನಾರ್ಥಗಳನ್ನು ಬರೆಯಿರಿ :

(i) ನೆರೆ

(ಆ) ಈ ಜೋಡು ನುಡಿಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ : **1+1=2**

(i) ನೆರೆ–ಹೊರೆ

(ii) ದಷ್ಟಪುಷ್ಟ

**ಅಥವಾ**

ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ :

(i) ಬಾಯಿಚಪಲ

(ii) ಶಿಸ್ತಿನ ಸಿಪಾಯಿ

(ಇ) ಈ ಪದಗಳನ್ನು ಬಿಡಿಸಿ ಬರೆಯಿರಿ : **1+1=2**

(i) ಆಹುತಿಯಾದನು

(ii) ಯಾರಿವರು

**ಅಥವಾ**

ಈ ಪದಗಳಲ್ಲಿನ ಪ್ರತ್ಯಯ ಗುರುತಿಸಿ ವಿಭಕ್ತಿ ಹೆಸರಿಸಿ :

(i) ಸುಜ್ಞಾನದಿಂ

(ii) ಪಾಪಿಗೆ

## ವಿಭಾಗ - B

## (ಅರ್ಥಗ್ರಹಿಕೆ) : 10 ಅಂಕಗಳು

**6.** ಈ ಗದ್ಯಭಾಗವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

ಅಲೆಕ್ಸಾಂಡರ್ ಮಹಾಶಯನು (ಕ್ರಿ.ಪೂ. ೩೫೬–೩೨೩) ಮ್ಯಾಸಿಡೋನಿಯದ ದೊರೆ. ಪರ್ಷಿಯ ಸಾಮ್ರಾಜ್ಯವನ್ನು ಸೋಲಿಸಿ ಭಾರತದವರೆಗೂ ದಂಡೆತ್ತಿ ಬಂದ ಮಹಾನಾಯಕ. ತಂದೆ ಫಿಲಿಪ್. ರಾಜನಾಗಿ ದೇಶವನ್ನು ಸುಭದ್ರ ತಳಹದಿಯ ಮೇಲೆ ಕಟ್ಟಿ, ಸತತವಾಗಿ ದುಡಿದು ಮಗನ ಪ್ರಗತಿಗೆ ಕಾರಣನಾದ. ತಂದೆಯ ಮರಣಾನಂತರ ಕ್ರಿ.ಪೂ. ೩೩೬ ರಲ್ಲಿ ತನ್ನ ೨೦ ನೆಯ ವಯಸ್ಸಿನಲ್ಲಿ ಅಲೆಕ್ಸಾಂಡರ್ ಪಟ್ಟಕ್ಕೆ ಬಂದು ದೇಶದಲ್ಲಿ ತಲೆ ಎತ್ತುತ್ತಿದ್ದ ಅಶಾಂತಿ ಅನಾಯಕತೆಗಳನ್ನು ನಿವಾರಿಸಿದ. ತಂದೆಯಂತೆ ರಾಜ್ಯವಿಸ್ತರಣೆಗೆ ಮನಸ್ಸು ಮಾಡಿದ. ಬಾಲ್ಯದಲ್ಲೇ ತಂದೆಯ ನೇತೃತ್ವದಲ್ಲಿ ಪಡೆದ ಉತ್ತಮ ವಿದ್ಯಾಭ್ಯಾಸದ ಜೊತೆಗೆ ಅವನಲ್ಲಿದ್ದ ಪ್ರತಿಭೆಯೂ ಸೇರಿ ಯುವಕ ಅಲೆಕ್ಸಾಂಡರನ ವ್ಯಕ್ತಿತ್ವ ಪ್ರಜ್ವಲಿಸತೊಡಗಿತು.

ಆತ ಎತ್ತರವಾದ ಆಳು. ಸ್ಫುರದ್ರೂಪಿ. ದೇಹದಾರ್ಢ್ಯವುಳ್ಳವ. ಸಂಕಲ್ಪದಂತೆ ಗುರಿಸಾಧಿಸುವ ದೃಢಬುದ್ಧಿ ಹೊಂದಿದ್ದ ತಾಯಿಯ ಬುದ್ಧಿವಿಚಾರ, ಅಹಂಕಾರ, ಉದ್ರೇಕಗಳು ಅವನಲ್ಲಿದ್ದುವು. ಗ್ರೀಕ್ ನಾಗರಿಕತೆ ಸಂಸ್ಕೃತಿಗಳನ್ನು ಆತ ಬಹುವಾಗಿ ಮೆಚ್ಚಿದ. ಹೋಮರನ ಇಲಿಯಡ್ ಮಹಾಕಾವ್ಯ ಅವನ ತುದಿನಾಲಗೆಯಲ್ಲಿತ್ತು. ಪ್ರಸಿದ್ಧ ವಿದ್ವಾಂಸನಾದ ಅರಿಸ್ಟಾಟಲ್ ಅವನ ಗುರು. ತತ್ತ್ವಶಾಸ್ತ್ರ, ವೈದ್ಯ, ವಿಜ್ಞಾನಗಳಲ್ಲಿ ಅಪಾರ ಆಸಕ್ತಿಯುಳ್ಳವ.

ಗ್ರೀಕ್ ರಾಜ್ಯಗಳನ್ನು ಸೋಲಿಸಿದನಾದರೂ ತಂದೆಯಂತೆ ಉದಾರ ನೀತಿಯನ್ನನುಸರಿಸಿ ಅವರ ಬೆಂಬಲವನ್ನು ಗಳಿಸಿಕೊಂಡ. ತಂದೆಯ ಕೊಲೆಗೆ ಕಾರಣರೆಂದು ಕಂಡುಬಂದ ಲೈಸೆಸ್ಟಿಸ್‌ನ ರಾಜರನ್ನು ತೀರಿಸಿ ತನ್ನ ವೈರಿಗಳೆನಿಸಿದ ಇತರರನ್ನೂ ನಿರ್ನಾಮ ಮಾಡಿದ. ಅನಂತರ ದಕ್ಷಿಣಕ್ಕೆ ತಿರುಗಿ ಥೆಸಲೆಯನ್ನು ಗಿಟ್ಟಿಸಿ ಗ್ರೀಕ್ ಒಕ್ಕೂಟದಲ್ಲಿ ಮುಂದಿನ ಏಷ್ಯ ದಿಗ್ವಿಜಯ ಕಾರ್ಯದ ಮಹಾದಂಡನಾಯಕನಾಗಿ ಆಯ್ಕೆಯಾದ. ಆದರೂ ಉತ್ತರ ಗ್ರೀಸಿನ ಇಲ್ಲಿರಿಯ ಮತ್ತು ಥ್ರೇಸ್ ಪ್ರದೇಶಗಳಲ್ಲಿ ಅಲೆಕ್ಸಾಂಡರನಿಗೆ ವಿರುದ್ಧವಾಗಿ ದಂಗೆಗಳಾದುವು. ಆದರೆ ಅಲೆಕ್ಸಾಂಡರ್ ತತ್‌ಕ್ಷಣವೇ ಆ ಪ್ರದೇಶಗಳಿಗೆ ಹೋಗಿ ದಂಗೆಗಳನ್ನು ಅಡಗಿಸಿದ. ಥ್ರೇಸ್‌ನಲ್ಲಿ ಯಾರೋ ಅಲೆಕ್ಸಾಂಡರನನ್ನು ಕೊಂದುಹಾಕಿದರೆಂಬ ಸುಳ್ಳು ಸಮಾಚಾರ ಥೀಬ್ಸ್ ನಗರದಲ್ಲಿ ಹರಡಿ ಥೀಬನ್ನರು ಮ್ಯಾಸಿಡೋನಿಯದ ರಕ್ಷಣ ಸೈನ್ಯಗಳಿಗೆ ಮುತ್ತಿಗೆ ಹಾಕಿದರು. ಅಲೆಕ್ಸಾಂಡರ್ ಥೀಬ್ಸ್ ನಗರದ ಮೇಲೆ ದಾಳಿಮಾಡಿ ಆ ನಗರವನ್ನು ನಾಶ ಮಾಡಿದ. ಹೆಂಗಸರು, ಮಕ್ಕಳು ಎಂದು ಲಕ್ಷಿಸದೆ ಸುಮಾರು ೩೦,೦೦೦ ಥೀಬನ್ನರನ್ನು ಸೆರೆಹಿಡಿದು ಗುಲಾಮರನ್ನಾಗಿಸಿದ. ಗ್ರೀಕರ ಸೊಲ್ಲು ಅಡಗಿ ಅವರು ಅಲೆಕ್ಸಾಂಡರನನ್ನು ತಮ್ಮ ನಾಯಕನೆಂದು ಒಪ್ಪಿಕೊಳ್ಳಬೇಕಾಯಿತು. ಗ್ರೀಸ್ ದೇಶ ಅಲೆಕ್ಸಾಂಡರನ ಹತೋಟಿಗೆ ಒಳಗಾಯಿತು.

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :**

(ಅ) ತಂದೆ ಫಿಲಿಪ್ ಅಲೆಕ್ಸಾಂಡರನ ಏಳಿಗೆಗೆ ಹೇಗೆ ಕಾರಣನಾದ ? **1**

(ಆ) ಯುವಕ ಅಲೆಕ್ಸಾಂಡರನ ವ್ಯಕ್ತಿತ್ವ ಹೇಗೆ ಪ್ರಜ್ವಲಿಸತೊಡಗಿತು ? **2**

(ಇ) ಅಲೆಕ್ಸಾಂಡರನ ತುದಿನಾಲಗೆಯ ಮೇಲಿದ್ದ ಮಹಾಕಾವ್ಯ ಯಾವುದು ? **1**

(ಈ) ಅಲೆಕ್ಸಾಂಡರನು ಗ್ರೀಕರ ಸೊಲ್ಲನ್ನು ಹೇಗೆ ಅಡಗಿಸಿದ ? **2**

**7.** ಕೆಳಗಿನ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ : **4**

ಮೂಢ ನಂಬಿಕೆ, ಅನಾದಿ
ಮೂಢ ನಂಬಿಕೆ.
ತೊಲಗಬಹುದು ಎಂದಿಗೆ
ಇದರ ಅಂಜಿಕೆ ?

ಹೊರಟಿದ್ದಾನೆ ತರುಣನೊಬ್ಬ
ಇಂಟರ್‌ವ್ಯೂಗೆ ತಾನು,
'ಎಲ್ಲಿ ಹೊರಟೆ?' ಎನ್ನಬೇಕೆ
ಪಕ್ಕದ ಮನೆ ವೇಣು,
ಜೊತೆಗೆ ಒಂಟಿ ಸೀನು;
ಹೋದ ಕೆಲಸ ಆದಹಾಗೇ!
ಇನ್ನೆಲ್ಲಿದೆ ಲಕ್ಕು?
ದಾರಿಗಡ್ಡ ಹಾಯಿತಲ್ಲ ಹಾಳು ಕಪ್ಪು ಬೆಕ್ಕು!
ದರಿದ್ರ ಕಪ್ಪು ಬೆಕ್ಕು!
ಹೊರಡಬಹುದೇ ಪ್ರಯಾಣಕ್ಕೆ
ರಾಹುಕಾಲದಲ್ಲಿ?
'ಉಂಟೆ? ಉಂಟೆ?' ಲೊಚಗುಟ್ಟಿದೆ
ಗೋಡೆ ಮೇಲೆ ಹಲ್ಲಿ.

ಸೇರಬಹುದೆ ನೌಕರಿಗೆ ?
ಇಂದು ಮಂಗಳವಾರ!
ಜೊತೆಗೆ ಅಮಾವಾಸ್ಯೆ ಕೂಡ!
ಕಾದಿದೆ ಗ್ರಹಚಾರ!
ಗ್ರಹಣವೆಂದರೇನು ? ಬರೀ
ಬೆಳಕು ನೆರಳಿನಾಟ.
ಶಾಲೆ ಕಾಲೇಜಿನಲ್ಲಿ
ಓದುತ್ತೇವೆ ಪಾಠ.
ಆದರೇನು ಬಾಳಿನಲ್ಲಿ
ಎಲ್ಲಿದೆ ವಿಜ್ಞಾನ ?
ಗ್ರಹಣ ಬಿಟ್ಟ ಕೂಡಲೇ
ಮಾಡುತ್ತೇವೆ ಸ್ನಾನ.

ಮೂಢ ನಂಬಿಕೆ, ಅನಾದಿ
ಮೂಢನಂಬಿಕೆ.
ತೊಲಗಲಿ ಇನ್ನಾದರೂ
ಇದರ ಅಂಜಿಕೆ.

## ವಿಭಾಗ - C

## (ಬರವಣಿಗೆ) : 15 ಅಂಕಗಳು

8. ಕೆಳಗಿನವುಗಳಲ್ಲಿ **ಒಂದನ್ನು** ಕುರಿತು ನಿಮ್ಮ ಅನುಭವಗಳನ್ನು ಬರೆಯಿರಿ : 5

   (ಅ) ಪರಿಸರ ರಕ್ಷಣೆಯ ಸೃಜನಾತ್ಮಕ ಕಾರ್ಯದಲ್ಲಿ ನೀವು ಭಾಗವಹಿಸಿದಾಗ . . . . .

   (ಆ) ಭೀಕರ ರಸ್ತೆ ಅಪಘಾತವನ್ನು ಕಣ್ಣಾರೆ ಕಂಡ ಸಂದರ್ಭ . . . . .

9. ನಿಮ್ಮ ಊರಿನಲ್ಲಿ ವಾಚನಾಲಯವಿಲ್ಲದಿರುವ ಕಾರಣ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ ಪತ್ರಿಕಾ ಸಂಪಾದಕರಿಗೊಂದು ಪತ್ರ ಬರೆಯಿರಿ. 5

10. ಕೆಳಗಿನ ಗದ್ಯಭಾಗವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ : 5

    ಶಿಕ್ಷಣದ ಖಾಸಗೀಕರಣ ಮತ್ತು ಭಾಷಾನೀತಿಯ ಮೂಲ ಉದ್ದೇಶವೇ ಕನ್ನಡದ ಮೇಲೆ ಪ್ರಭುತ್ವ ಸಾಧಿಸುವುದಾಗಿದೆ. ಆದ್ದರಿಂದ ನಮ್ಮ ಭಾಷೆಯೇ ನಮ್ಮ ಬದುಕಾಗಲಿ ಮತ್ತು ಪ್ರಭುತ್ವವಾಗಲಿ. ನಮ್ಮ ಕನ್ನಡ ಭಾಷೆಯು ಕೇವಲ ಸಂವಹನ ಮಾಧ್ಯಮವಲ್ಲ. ಅದು ನಮ್ಮ ಸಂಸ್ಕೃತಿಯ ವಾಹಕ ಶಕ್ತಿಯಾಗಿದೆ. ಕನ್ನಡ ನಮ್ಮ ಬದುಕಿನೊಂದಿಗೆ ಬೆರೆತು ಹೋಗಿದೆ. ಅದರಿಂದ ನಮ್ಮ ಬದುಕನ್ನು ಭದ್ರಗೊಳಿಸಿದೆ. ಒಂದು ಸಮುದಾಯದ ಬದ್ಧತೆಯನ್ನು ಬಯಸಿ ಜೀವಂತಿಕೆಯನ್ನು ಸಾರುವುದೇ ಭಾಷೆಯ ಮೂಲ ಉದ್ದೇಶವಾಗಿದೆ.

    ಕನ್ನಡಿಗರು ತಮ್ಮ ಉಳಿವಿಗಾಗಿ ಬೀದಿ ಹೋರಾಟಗಳ ಮೂಲಕ ಮತ್ತು ಸಂಸ್ಕೃತದ ಜಡಮೌಲ್ಯದ ವಿರುದ್ಧ ಮೌನದ ಧಿಕ್ಕಾರ ಕೂಗುತ್ತಾ ಬಂದಿದ್ದಾರೆ. ಈ ನೆಲದ ಜನರ ಧ್ವನಿಯು ಎಲ್ಲೆಡೆಯೂ ಪಸರಿಸಬೇಕಿದೆ. ನಮ್ಮ ಎಲ್ಲ ಧಾರ್ಮಿಕ ಆಚರಣೆಗಳು ನಮ್ಮ ತಾಯಿಯ ಭಾಷೆಯ ಮೂಲಕ ನಡೆಯಬೇಕು. ಕೇವಲ ಧಾರ್ಮಿಕತೆ ಮಾತ್ರವಲ್ಲದೆ, ನಮ್ಮ ನಾಡಿನ ಸಕಲ ರಂಗಗಳು ಅಂದರೆ ಸಿನೆಮಾ, ಸಾಹಿತ್ಯ, ಉದ್ಯೋಗ ಮತ್ತು ತಾಂತ್ರಿಕತೆ ಸಮೀಕರಣದ ಮೂಲಕವೇ ನಡೆಯಬೇಕು.

ನಮ್ಮ ಭಾಷೆಯ ಉಳಿವಿಗಾಗಿ ನಡೆದ ಹೋರಾಟದ ಹಾದಿ ಬಹು ವಿಸ್ತಾರವಾಗಿದೆ. ಆ ಮೂಲಕವೇ ಅದು ತನ್ನ ಸ್ಥಾನವನ್ನು ಉಳಿಸಿಕೊಂಡಿದೆ. ಇದಕ್ಕೆ ಗೋಕಾಕ್ ಚಳವಳಿಯೇ ಉತ್ತಮ ಉದಾಹರಣೆಯಾಗಿದೆ. ನಮ್ಮ ನಾಡಿನಲ್ಲಿರುವ ಜಡಮೌಲ್ಯದ ಭಾಷೆಯಾದ ಸಂಸ್ಕೃತವನ್ನು ಪ್ರಥಮ ಭಾಷಾ ಸ್ಥಾನಮಾನದಿಂದ ಕೆಳಗೆ ಇಳಿಸಲು ಹೋರಾಟ ಮಾಡಿ ಯಶಸ್ವಿಯಾದರು. ಅದರಂತೆ ಕನ್ನಡದ ಉಳಿವಿಗಾಗಿ ೧೯೭೯ ರಲ್ಲಿ ಕರ್ನಾಟಕದಲ್ಲಿ ಕನ್ನಡ ಚಲನಚಿತ್ರ ಪ್ರದರ್ಶನ ಕಡ್ಡಾಯ ಆದೇಶವನ್ನು ಜಾರಿಗೊಳಿಸುವಲ್ಲಿ ಯಶಸ್ವಿಯಾದರು. ೧೯೮೮ ರಲ್ಲಿ ಕನ್ನಡ ದೂರದರ್ಶನ ಕೇಂದ್ರವನ್ನು ಆರಂಭಿಸಿದರು. ಮುಂದೆ ೧೯೯೧ ರಲ್ಲಿ ಹಂಪಿ ವಿಶ್ವವಿದ್ಯಾಲಯ ಸ್ಥಾಪಿಸಿದರು. ೧೯೯೨ ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸಿದರು.

## ವಿಭಾಗ - D

## (ಪಠ್ಯಗಳ ಅಧ್ಯಯನ) : 50 ಅಂಕಗಳು

### ಗದ್ಯಭಾಗ

**11.** ಒಂದು ವಾಕ್ಯದಲ್ಲಿ ಉತ್ತರಿಸಿ **(ನಾಲ್ಕಕ್ಕೆ) :** **1x4=4**

(ಅ) ಸುದಾಮೆಯು ಯಾರಿಗೆ ಭಾಷೆ ಕೊಟ್ಟಳು ?

(ಆ) ಜೊಹರಾಳ ಎರಡು ಮಕ್ಕಳ ಹೆಸರು ತಿಳಿಸಿ.

(ಇ) ಟುವ್ವಿ ಹಕ್ಕಿಯ ಗೂಡು ಯಾವುದರಿಂದ ನಿರ್ಮಾಣವಾಗಿತ್ತು ?

(ಈ) ನೀಷೆ ಯಾರು ?

(ಉ) ಪ್ಯಾರಿಸ್‌ನಲ್ಲಿ ಲೇಖಕರು ಕಾರಿನಲ್ಲಿ ಎಲ್ಲಿಗೆ ಹೊರಟಿದ್ದರು ?

**12.** ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ **(ಎರಡಕ್ಕೆ) :** **2x2=4**

(ಅ) ನಾಟಿ ಔಷಧಿಯನ್ನು ತೆಗೆದುಕೊಂಡ ಜೊಹರಾಗೆ ಏನಾಯಿತು ?

(ಆ) ಮರಿಸ್ಸಾ ಹುಟ್ಟಿದ ತಕ್ಷಣ ಬೋನ್ ಮ್ಯಾರೋ ವರ್ಗಾವಣೆ ಮಾಡಲು ಏಕೆ ಸಾಧ್ಯವಿರಲಿಲ್ಲ ?

(ಇ) ವಿಮಾನ ನಿಲ್ದಾಣದಿಂದ ಹೊರಬಂದಾಗ ಲೇಖಕರು ಏನೇನು ಮಾಡಬೇಕಾಯಿತು ?

**13.** ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ **(ಒಂದಕ್ಕೆ)** : **3x1=3**

(ಅ) ಅನುಕೂಲಸ್ಥರ ಸಾಮಾಜಿಕ ಮೌಲ್ಯಗಳೆಲ್ಲ ಹೀಗೇನೇ ತಾನೇ ?

(ಆ) ನಮ್ಮದು ಏನಿದ್ದರೂ ಮಾಹಿತಿ ಸಂಗ್ರಹದ ಕ್ಷೇತ್ರ.

**14.** ಐದಾರು ವಾಕ್ಯಗಳಲ್ಲಿ ಉತ್ತರಿಸಿ **(ಒಂದಕ್ಕೆ)** : **4x1=4**

(ಅ) ಕುವೆಂಪು ಅವರ ಮಂಗಳಾರತಿಯ ಪ್ರಸಂಗದ ಸ್ವಾರಸ್ಯ ಬರೆಯಿರಿ.

(ಆ) ನಾಲ್ವರು ಸುಭಟರ ಪ್ರಸಂಗದಲ್ಲಿ ಸುಮತಿಯ ಜಾಣ್ಮೆ ಹೇಗೆ ವ್ಯಕ್ತವಾಗಿದೆ ? ವಿವರಿಸಿ.

## ಪದ್ಯಭಾಗ

**15.** ಒಂದು ವಾಕ್ಯದಲ್ಲಿ ಉತ್ತರಿಸಿ **(ನಾಲ್ಕಕ್ಕೆ)** : **1x4=4**

(ಅ) ಕಾವಿ ಉಟ್ಟು ಮೂಲೆಗೆ ಕೂತವನು ಯಾರು ?

(ಆ) ತಂಗಿ ಹುಟ್ಟಿದಾಗ ಮನೆಯಲ್ಲಿ ಎಂತಹ ವಾತಾವರಣ ಮೂಡಿತ್ತು ?

(ಇ) ಪೆಟ್ರೋಮ್ಯಾಕ್ಸ್ ಹೊತ್ತವರು ಯಾವುದರಲ್ಲಿ ಹೂತು ಹೋಗುತ್ತಾರೆ ?

(ಈ) ಕಪ್ಪು ಕೇಶಗಳು ಏನನ್ನು ಸಂಕೇತಿಸುತ್ತವೆ ?

(ಉ) ರಕ್ತಮಾಂಸದ ಜೊತೆಗೆ ಏನೇನನ್ನು ಹುಟ್ಟಿಸಿಕೊಂಡಿದ್ದೇವೆ ?

**16.** ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ : **(ಎರಡಕ್ಕೆ)** **2x2=4**

(ಅ) ಕಾಯಕವನ್ನು ಹೇಗೆ ಮಾಡಬೇಕೆಂದು ಲಕ್ಕಮ್ಮನವರು ಅಭಿಪ್ರಾಯಪಡುತ್ತಾರೆ ?

(ಆ) ಪತಿಯ ಸುಖ–ದುಃಖಗಳಿಗೆ ಪತ್ನಿ ಹೇಗೆ ಸ್ಪಂದಿಸುವಳು ?

(ಇ) ನಿಜವಾದ ಮಂದಿರ, ಮಸೀದಿಗಳು ಎಲ್ಲಿವೆಯೆಂದು ಕವಿ ಹೇಳುತ್ತಾರೆ ?

**17.** ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ **(ಒಂದಕ್ಕೆ) :** **3x1=3**

(ಅ) ನೀರೊಳಗಿರ್ದುಂ ಬೆಮರ್ತನುರಗಪತಾಕಂ

(ಆ) ರಂಟೆ ಹೊಡೆದು ಬೆಳೆಸುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ

**18.** ಐದಾರು ವಾಕ್ಯಗಳಲ್ಲಿ ಉತ್ತರಿಸಿ **(ಒಂದಕ್ಕೆ) :** **4x1=4**

(ಅ) ಲೋಹಿತಾಶ್ವನು ದುರ್ಮರಣ ಹೊಂದಿದ ಸಂದರ್ಭವನ್ನು ವಿವರಿಸಿ.

(ಆ) ಭೀಮಾಲಾಪದಲ್ಲಿ ವ್ಯಕ್ತವಾಗುವ ಭೀಮನ ತೊಳಲಾಟವನ್ನು ವಿವರಿಸಿ.

**ನಾಟಕ**

**19.** ಒಂದು ವಾಕ್ಯದಲ್ಲಿ ಉತ್ತರಿಸಿ **(ಮೂರಕ್ಕೆ) :** **1x3=3**

(ಅ) ಸೈನಿಕರ ಪ್ರಕಾರ 'ಪವಿತ್ರ ಕರ್ತವ್ಯ' ಯಾವುದು ?

(ಆ) ಯಾರ ಸುದ್ದಿಗೆ ರಾಜ ಬರಬಾರದೆಂದು ಗಾಳಣ್ಣ ಹೇಳುತ್ತಾನೆ ?

(ಇ) ಏಕಲವ್ಯನಿಗೆ ಕಲಿಸಲು ದ್ರೋಣಾಚಾರ್ಯರು ನಿರಾಕರಿಸುವುದೇಕೆ ?

(ಈ) ಪಾಂಡವರ ಎಲ್ಲ ಅಪಮಾನಗಳಿಗೆ ಕೊನೆ ಯಾವುದು ?

**20.** ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ **(ಒಂದಕ್ಕೆ) :** **2x1=2**

(ಅ) ಏಕಲವ್ಯ ನಿಜವಾದ ವೀರ ಎಂದು ಅರ್ಜುನನು ಹೇಳಿದ್ದು ಹೇಗೆ ?

(ಆ) ಹಾಡುಗಾರರು ಏಕಲವ್ಯನ ಕಥೆ ಎಂಥದೆಂದು ಹೇಳುವರು ?

**21.** ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ **(ಒಂದಕ್ಕೆ) :** **3x1=3**

(ಅ) ಬಿಲ್ಲು ವಿದ್ಯೆ ಬೇಡರ ಹುಟ್ಟುಗುಣ

(ಆ) ನಿನ್ನ ಬಲಗೈ ಹೆಬ್ಬೆರಳನ್ನು ಕೊಡು ಏಕಲವ್ಯ

**22.** ಐದಾರು ವಾಕ್ಯಗಳಲ್ಲಿ ಉತ್ತರಿಸಿ **(ಒಂದಕ್ಕೆ) :** **4x1=4**

(ಅ) **'ಕುರುಕ್ಷೇತ್ರ ಉಳ್ಳವರ ನಡುವಿನ ಕಚ್ಚಾಟ'** – ಏಕಲವ್ಯನ ಧೋರಣೆಯಿಂದ ವಿವರಿಸಿ.

(ಆ) ಏಕಲವ್ಯನ ಶಬ್ದವೇಧಿ ವಿದ್ಯೆ ಕಂಡು ಅರ್ಜುನ ಹೇಗೆ ತಳಮಳಿಸಿದನು ? ವಿವರಿಸಿ.

## ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ (ಕವಿ ಕೃತಿ ಹಿನ್ನೆಲೆಯಲ್ಲಿ)

**23.** ಕೆಳಗಿನ ಯಾವುದಾದರೂ ಇಬ್ಬರು ಕವಿ – ಕೃತಿ ಪರಿಚಯ ಮಾಡಿಕೊಡಿ : **4x2=8**

(ಅ) ಪಂಪ

(ಆ) ಕನಕದಾಸರು

(ಇ) ಅಕ್ಕಮಹಾದೇವಿ

(ಈ) ಜಿ.ಎಸ್. ಶಿವರುದ್ರಪ್ಪ